ಇಲವಾಲದಿಂದ ಕೆ.ಆರ್.ನಗರಕ್ಕೆ ಹೋಗುವ ರಸ್ತೆಯಲ್ಲಿ ಸಾಗರಕಟ್ಟೆಯ ಹತ್ತಿರ ಕೆ.ಆರ್.ನಗರ ಹಿನ್ನೀರಿನಲ್ಲಿ ಸೇತುವೆಯ ನಿರ್ಮಾಣವನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಮೂರನೇ ಹಂತದ ಸೇತುವೆಯ ಯೋಜನೆಯ ಅಡಿಯಲ್ಲಿ ಹೆಚ್ಚುವರಿ ಕಾಮಗಾರಿಯಾಗಿ ರೂ.10.00 ಕೋಟಿಗಳ ಅಂದಾಜು ಮೊತ್ತದಲ್ಲಿ ತೆಗೆದುಕೊಳ್ಳಲಾಯಿತು. ಈ ಕಾಮಗಾರಿಯನ್ನು ಮೆ:ಗ್ಯಾಮನ್ ಇಂಡಿಯಾ ಲಿ. ಇವರಿಗೆ ವಹಿಸಲಾಗಿದೆ. ಈ ಸೇತುವೆ ಕಾಮಗಾರಿಯನ್ನು ಅಕ್ಟೋಬರ್ 2006 ರಲ್ಲಿ ಪ್ರಾರಂಭಿಸಲಾಗಿದೆ. ಸೇತುವೆಯ ಕಾಮಗಾರಿಯನ್ನು ಕೆ.ಆರ್.ಎಸ್. ಜಲಾಶಯದಲ್ಲಿನ ನೀರಿನ ಮಟ್ಟ ಕಡಿಮೆ ಆಗದಿರುವುದರಿಂದ ಜೂನ್ 2007ರಿಂದ ಸ್ಥಗಿತಗೊಂಡಿದೆ. ಅಲ್ಲದೇ ಸೇತುವೆಯ ಈಗಿನ ಅಂದಾಜು ಮೊತ್ತವು ಕೂಡ ಹೆಚ್ಚಾಗಿರುವುದರಿಂದ ಹೆಚ್ಚುವರಿ ಅನುದಾನ ನೀಡುವ ಕುರಿತು ಪರಿಶೀಲಿಸಲಾಗುತ್ತಿದೆ.

212 ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್.

ಮಾನ್ಯ ಸಾರಿಗೆ ಸಚಿವರು.

ಅ) ಸಾರಿಗೆ ಇಲಾಖೆಯ ಬಸ್ಸುಗಳನ್ನು ಎಷ್ಟು ಕಿ.ಮೀ. ಕ್ರಮಿಸಿದ ನಂತರ ನಿರುಪಯುಕ್ತವೆಂದು ಪರಿಗಣಿಸಲಾಗುವುದು;

8.5 ಲಕ್ಷ ಕಿ.ಮೀ.ಗಳು.

ಆ) ಬಾಗಲಕೋಟೆ ಜಿಲ್ಲೆಯ ಜಮಖಂಡಿ ಡಿಪೋಕ್ಕೆ ಸಂಬಂಧಿಸಿದ ಎಷ್ಟು ವಾಹನಗಳನ್ನು ನಿರುಪಯುಕ್ತವೆಂದು ಪರಿಗಣಿಸಲಾಗಿದೆ;

2008-09ನೇ ಸಾಲಿನಲ್ಲಿ 18 ವಾಹನಗಳು.

ಇ) ಸಾರ್ವಜನಿಕರ ಅನುಕೂಲಕ್ಕಾಗಿ ಅವಶ್ಯವಿರುವ ಬಸ್ಸುಗಳನ್ನು ಪೂರೈಸಲಾಗುತ್ತದೆಯೇ;

ಹೌದು.

ಈ) ಹಾಗಿದ್ದಲ್ಲಿ, ಯಾವಾಗ ಪೂರೈಸಲಾಗುವುದು;

ಇನ್ನೂ ಹೆಚ್ಚಿನ ಹೊಸ ಬಸ್ಸುಗಳನ್ನು ಹಂತ ಹಂತವಾಗಿ ಪೂರೈಸಲಾಗುವುದು.

ಉ) ಜಮಖಂಡಿ ಘಟಕವನ್ನು ಮೇಲ್ದರ್ಜೆಗೆ ಏರಿಸುವ ವಿಚಾರ ಸರ್ಕಾರಕ್ಕಿದೆಯೇ?

ಇದೆ.

ಜಮಖಂಡಿ ಬಸ್ ಘಟಕವನ್ನು ಮೂಲಭೂತ ಸೌಲಭ್ಯವನ್ನೊಳಗೊಂಡಂತೆ ಮೇಲ್ದರ್ಜೆಗೇರಿಸಲು ಯೋಜಿಸಲಾಗಿದೆ. ಸದರಿ ಕಾಮಗಾರಿಗಳನ್ನು ಸಂಸ್ಥೆಯ

ಆರ್ಥಿಕ ಪರಿಸ್ಥಿತಿಯನ್ನಾಧರಿಸಿ ಮುಂದಿನ ಕ್ರಿಯಾಯೋಜನೆಯಲ್ಲಿ ಅಳವಡಿಸಿಕೊಂಡು ಮೇಲ್ದರ್ಜೆಗೇರಿಸಲಾಗುವುದು.

213 ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್
ಮಾನ್ಯ ಮುಖ್ಯಮಂತ್ರಿಗಳು

ಅ) ಜಮಖಂಡಿ ನಗರದಲ್ಲಿ ಅರಣ್ಯ ಇಲಾಖೆಯಿಂದ ಕಟ್ಟಿರುವ ವಿಶ್ರಾಂತಿ ಗೃಹ (ಅತಿಥಿ ಗೃಹ) ಯಾವಾಗ ಕಟ್ಟಲ್ಪಟ್ಟಿದೆ;

1990–91

ಆ) ಈ ಅತಿಥಿ ಗೃಹಕ್ಕೆ ಹೋಗಿ ಬರಲು ರಸ್ತೆ ಹಾಗೂ ಮೂಲಭೂತ ಸೌಕರ್ಯಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು, ರಸ್ತೆ ನೀರು ಮತ್ತು ವಿದ್ಯುತ್ ಮೂಲಭೂತ ಸೌಕರ್ಯಗಳು ಇರುವುದಿಲ್ಲ.

ಇ) ಹಾಗಿದ್ದಲ್ಲಿ, ಮೂಲಭೂತ ಸೌಕರ್ಯಗಳನ್ನು ಒದಗಿಸಿ ಸಾರ್ವಜನಿಕರ ಅನುಕೂಲಕ್ಕೆ ಯಾವಾಗ ಅನುವು ಮಾಡಿಕೊಡಲಾಗುವುದು?

ಅನುದಾನದ ಲಭ್ಯತೆಯ ಮೇಲೆ ಮೂಲಭೂತ ಸೌಕರ್ಯವನ್ನು ಒದಗಿಸಿ ಅತಿಥಿ ಗೃಹವನ್ನು ಇಲಾಖೆಗೆ ಉಪಯೋಗಿಸಲಾಗುವುದು.

214 ಶ್ರೀ ಬಾಲಾಜಿ ಆರ್.ಮೆಂಡನ್ (ಕಾಪು)
ಮಾನ್ಯ ಲೋಕೋಪಯೋಗಿ ಸಚಿವರು

ಅ ಕಾಪು ವಿಧಾನಸಭಾ ಕ್ಷೇತ್ರದ ಕೋಟೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಮಟ್ಟು ಗ್ರಾಮದ ನದಿಯ ಮಧ್ಯೆ ದೇವರ ಕುದ್ರು ಎಂಬಲ್ಲಿ ಸುಮಾರು 5–6 ತಲೆಮಾರುಗಳಿಂದಲೂ ಹೆಚ್ಚಾಗಿ ವಾಸಿಸಿಕೊಂಡಿರುವ ಕುಟುಂಬಗಳು ದಿನನಿತ್ಯ ಪಟ್ಟಣ, ನಗರ ಪ್ರದೇಶಗಳಿಗೆ ಹಾಗೂ ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳಿಗೆ ಹೋಗಲು ದೋಣಿಯನ್ನು ಅವಲಂಬಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ ಈಗಲಾದರೂ ತುರ್ತಾಗಿ ಅನುದಾನ ಬಿಡುಗಡೆಗೊಳಿಸಿ ಈ ಸಾಲಿನಲ್ಲಿ ಕಾಮಗಾರಿ ಪ್ರಾರಂಭಿಸಲು ಕ್ರಮ ಕೈಗೊಳ್ಳುವುದೇ?

ಕೋಟೆ ಗ್ರಾಮ ಪಂಚಾಯತ್ ವ್ಯಾಪಿಯ ದೇವರಕುದ್ರು ವಾಂಗಳಾ ನದಿಗೆ ಸೇತುವೆ ನಿರ್ಮಾಣ ಮಾಡಲು 300.00 ಲಕ್ಷ ರೂ.ಗಳ ಪ್ರಸ್ತಾವನೆಯು ನಬಾರ್ಡ್‌ನ